ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.— ಒಂದೇ ಒಂದು ಪ್ರಶ್ನೆ ಇದೆ. ಸರ್‌ಪ್ಲಸ್ ಲ್ಯಾಂಡ್ ಗ್ರಾಂಟ್ ಸ್ಕೀಮ್ ಇದೆಯಲ್ಲ ಅದರಲ್ಲಿ ಸೆಂಟ್ರಲ್ ಗೌರ್ನಮೆಂಟ್‌ನಿಂದ ಹಣ ಬಂದಿಲ್ಲ ಎಂದು ಹೇಳಿದ್ದೀರಿ ನಾನು ಕೇಳುವುದೇನೆಂದರೆ ಲ್ಯಾಂಡ್ ರಿಫಾರ್ಮ್ಸ್ ಆಕ್ಟ್ ಪ್ರಕಾರ ಎಲ್ಲೆಲ್ಲಿ ಸರ್‌ಪ್ಲಸ್ ಲ್ಯಾಂಡ್ ಕೊಟ್ಟಿದ್ದೇವೆ ಅವರಿಗೆ ಅನುಕೂಲ ಆಗಬೇಕು. ಅವರು ಭೂಮಿಯನ್ನು ಉಳಿಸಿಕೊಳ್ಳಬೇಕು ಅಂದರೆ ಕನಿಷ್ಠಪಕ್ಷ ಈ ಬಗ್ಗೆ ತಾವು ಗಮನ ಕೊಟ್ಟು ಕೆಲಸ ಮಾಡಬೇಕಾಗುತ್ತದೆ. ೨೧ ಲಕ್ಷ ರೂಪಾಯಿ ಗಳಿಂದ ಎಷ್ಟು ಜನರಿಗೆ ಬೆನಿಫಿಟ್ ಆಗಿದೆ ? ಇನ್ನೂ ಎಷ್ಟು ಟಾರ್ಗೆಟ್ ಇದೆ ?

ಶ್ರೀ ಅಬ್ದುಲ್ ನಜೀರ್ ಸಾಬ್. ಗುರಿ ಇಲ್ಲ. ೨೧ ಲಕ್ಷ ಖರ್ಚು ಮಾಡಬೇಕೆಂದಿದೆ. ಸರ್‌ಪ್ಲಸ್ ಲ್ಯಾಂಡ್ ಈಗ ಸಿಗುವುದಿಲ್ಲ. ಈ ವರ್ಷ ಗುಲ್ಬರ್ಗ ಜಿಲ್ಲೆಯಲ್ಲಿ ಒಂದು ಎಕರೆ ಕೂಡ ಸರ್‌ಪ್ಲಸ್ ಲ್ಯಾಂಡ್ ಇಲ್ಲ. ನಾನೇನು ಮಾಡಬೇಕು ? ಅದಕ್ಕೆ ಕೇಂದ್ರ ಸರ್ಕಾರದ ಅನುಮತಿ ಪಡೆದು ಒಂದು ತಿದ್ದುಪಡಿ ಮಾತಾಡ್ದೇವೆ ೧೯೮೫ ರಿಂದ ಈಚೆಗೆ ದರಖಾಸ್ತು ಭೂಮಿ ಏನು ಪಡೆದಿದ್ದಾರೆ ಅವರಿಗೆ ಕೂಡ ಸಬ್ಸಿಡಿ ಕೊಡುತ್ತೇವೆ, ಬ್ಯಾಂಕಿನ ಸಹಾಯ ಒದಗಿಸುತ್ತೇವೆ.....

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ. — ಸರ್‌ಪ್ಲಸ್ ಲ್ಯಾಂಡ್ ಇದೆ. ಬೇಕಾದಷ್ಟಿದೆ ವಾಪಸ್ ತೆಗೆದುಕೊಳ್ಳುತ್ತಿದ್ದಾರೆ.

ಶ್ರೀ ಅಬ್ದುಲ್ ನಜೀರ್ ಸಾಬ್.— ಎಲ್ಲಿ ವಾಪಸ್ ತೆಗೆದುಕೊಳ್ಳುತ್ತಿದ್ದಾರೆ ? ಭೂ ಕಾಯಿದೆ ಗನುಗುಣವಾಗಿ ಹೆಚ್ಚುವರಿ ಭೂಮಿ ಇರುವುದನ್ನು ಹೇಳುತ್ತಿದ್ದೇನೆ. ಕಾನೂನು ಪ್ರಕಾರ ಹೈಕೋರ್ಟ್ ಹೇಳಿದಂತೆ ನಡೆದುಕೊಳ್ಳಬೇಕು. ಕಾನೂನು ಪ್ರಕಾರ ಎಲ್ಲಿಯೂ ಸರ್‌ಪ್ಲಸ್ ಲ್ಯಾಂಡ್ ಇಲ್ಲ. ಪ್ರತಿ ಜಿಲ್ಲೆಗೂ ಇದು ಹಂಚಿಕೆಯಾಗಬೇಕು. ಅದಕ್ಕಾಗಿ ದರಖಾಸ್ತು ಭೂಮಿ ಕೊಟ್ಟವರಿಗೂ ಕೊಡಬೇಕೆಂದು ಹೇಳಿದ್ದೇನೆ. ಕೇಂದ್ರಕ್ಕೆ ಈ ಬಗ್ಗೆ ಬರೆದಿದ್ದೇವೆ ಅವರೂ ಒಪ್ಪಿದ್ದಾರೆ.

ಅಧ್ಯಕ್ಷರು.— ಮುಂದಿನ ಪ್ರಶ್ನೆ ವೆಂಕಟರಾಮಯ್ಯನವರದು. ಅವರ ಪ್ರಶ್ನೆಯನ್ನು ಬೇರೆ ಇಲಾಖೆಗೆ ವರ್ಗಾಯಿಸಲಾಗಿದೆ.

ಶ್ರೀ ಆರ್. ವೆಂಕಟರಾಮಯ್ಯ.— ಮತ್ತೆ ತಪ್ಪಾಗಿದೆ. ಸಿ ಅಂಡ್ ಐ ಎಂದೂ ಹೇಳಿದ್ದಾರೆ. ಅದೂ ತಪ್ಪು. ಭೂಗರ್ಭ ಇಲಾಖೆಗೆ ಹೋಗಬೇಕು.

ಅಧ್ಯಕ್ಷರು.— ಮುಂದಿನ ಪ್ರಶ್ನೆ ಡಿ. ಟಿ. ಜಯಕುಮಾರ್ ಅವರದು ಮಾನ್ಯ ಮಂತ್ರಿಗಳು ಸದಸ್ಯರಲ್ಲಿಲ್ಲ ಎಂದು ಹೊರಗೆ ಹೋಗಿದ್ದಾರೆ.

ದಿನದ ಪಟ್ಟಿಯಲ್ಲಿ ಸೇರಿಸಲಾದ ಪ್ರಶ್ನೋತ್ತರಗಳು

ಚಲನಚಿತ್ರ ತರಬೇತಿ ಕಾಲೇಜುಗಳು

೧೫೫೩. ಶ್ರೀ ಡಿ. ಟಿ. ಜಯಕುಮಾರ್ (ನಂಜನಗೂಡು).— ಮಾನ್ಯ ವಾರ್ತಾ, ಪ್ರವಾಸೋದ್ಯಮ ಮತ್ತು ಸಂಸ್ಕೃತಿ ಹಾಗೂ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಸರ್ಕಾರದವರು ಚಲನಚಿತ್ರ ತರಬೇತಿ ಕಾಲೇಜನ್ನು ನಡೆಸುತ್ತಿದ್ದಾರೆಯೇ ?

ಆ) ಹಾಗಿದ್ದಲ್ಲಿ ಯಾವ ಯಾವ ವಿಷಯಗಳಲ್ಲಿ ತರಬೇತಿ ನೀಡಲು ವ್ಯವಸ್ಥೆ ಮಾಡಲಾಗಿದೆ.

ಇ) ಇದುವರೆಗೆ ಎಷ್ಟು ವಿದ್ಯಾರ್ಥಿಗಳು ತರಬೇತಿ ಹೊಂದಿದ್ದಾರೆ ? (ವಿವಿಧ ವಿಷಯಗಳ ವಿವರ ನೀಡುವುದು)

ಶ್ರೀ ಎಂ. ಪಿ. ಪ್ರಕಾಶ್ (ವಾರ್ತಾ, ಪ್ರವಾಸೋದ್ಯಮ ಮತ್ತು ಸಂಸ್ಕೃತಿ ಹಾಗೂ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಸಚಿವರು).—

ಅ) ಇಲ್ಲ.

ಆ) ಉದ್ಭವಿಸುವುದಿಲ್ಲ.

ಇ) ಉದ್ಭವಿಸುವುದಿಲ್ಲ.

ಕನ್ನಡ ಮತ್ತು ಸಂಸ್ಕೃತಿ ಇಲಾಖೆಯು ಗೌರವ ಧನ ನೀಡಿರುವುದು

೧೩೫೧ ಶ್ರೀ ಎನ್. ಟಿ. ಬೊಮ್ಮಣ್ಣ (ಕೂಡ್ಲಿಗಿ). — ಮಾನ್ಯ ವಾರ್ತಾ ಪ್ರವಾಸೋದ್ಯಮ ಸಂಸ್ಕೃತಿ ಹಾಗೂ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ವಿವಿಧ ಸಾಂಸ್ಕೃತಿಕ ಕ್ಷೇತ್ರಗಳಲ್ಲಿ ಸೇವೆ ಸಲ್ಲಿಸಿದವರಿಗೆ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯು ೧೯೮೭-೮೮ನೇ ಸಾಲಿನಲ್ಲಿ ಎಷ್ಟು ಜನರಿಗೆ ಗೌರವಧನ ನೀಡಿದೆ ?

ಆ) ಗೌರವ ಧನವನ್ನು ಪಡೆಯುತ್ತಿರುವವರಲ್ಲಿ ಕೆಲವರು ನಿವೃತ್ತಿ ವೇತನವನ್ನು ಪಡೆಯುತ್ತಿರುವುದು ಮತ್ತು ಬಾಡಿಗೆಯನ್ನು ಪಡೆಯುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಇ) ಗೌರವ ಧನ ನೀಡುವಲ್ಲಿ ಸರ್ಕಾರವು ವ್ಯಕ್ತಿಯ ಆರ್ಥಿಕ ಸ್ಥಿತಿಯನ್ನು ಪರಿಗಣಿಸಿದೆಯೇ ?

ಶ್ರೀ ಎಂ. ಪಿ. ಪ್ರಕಾಶ್ (ವಾರ್ತಾ, ಪ್ರವಾಸೋದ್ಯಮ ಸಂಸ್ಕೃತಿ ಹಾಗೂ ಬಿಡಿಎ ಸಚಿವರು)

ಅ) ಇಲ್ಲ.

ಆ) ನಿವೃತ್ತಿ ವೇತನ ಪಡೆಯುತ್ತಿರುವುದು ಗಮನಕ್ಕೆ ಬಂದಿದೆ. ಬಾಡಿಗೆ ಪಡೆಯುತ್ತಿರುವುದು ಗಮನಕ್ಕೆ ಬಂದಿರುವುದಿಲ್ಲ.

ಇ) ಹೌದು.

ಮೊಳಗಾಂ ಭೋಪಾಲ್‌ಗಢ್ ರಸ್ತೆ

೧೬೬೫. ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ (ಔರಾದ್).— ಮಾನ್ಯ ಗ್ರಾಮೀಣಾಭಿವೃದ್ಧಿ, ಪಂಚಾಯತ್‌ರಾಜ್ ಮತ್ತು ಜಕ್ಕ್ ಹಾಗೂ ಪಶುಸಂಗೋಪನ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಔರಾದ ತಾಲ್ಲೂಕಿನಲ್ಲಿರುವ ಮೊಳಿಗಾಂ ಗ್ರಾಮದಿಂದ ಭೋಪಾಳಗಡ ಗ್ರಾಮದವರೆಗೆ ರಸ್ತೆಯ ಕಾವಂಗಾರಿಗಾಗಿ ತಗುಲಿದ ವೆಚ್ಚವೆಷ್ಟು ?

ಆ) ಆ ರಸ್ತೆಯಲ್ಲಿ ಬೇನಾಮಿಯಾಗಿ ಹಣ ವೆಚ್ಚ ಮಾಡಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಇ) ಹಾಗಿದ್ದಲ್ಲಿ ಸಂಬಂಧಪಟ್ಟವರ ಮೇಲೆ ಕೈಗೊಂಡ ಕ್ರಮವೇನು ?

ಶ್ರೀ ಎಂ. ಚಂದ್ರಶೇಖರ್ (ನಗರಾಭಿವೃದ್ಧಿ ಮತ್ತು ಲೋಕೋಪಯೋಗಿ ಸಚಿವರು).—

ಅ) ಮೊಳಗಾಂ ಗ್ರಾಮದಿಂದ ಭೂಪಾಳಗಡ ಗ್ರಾಮದವರೆಗಿನ ರಸ್ತೆಯನ್ನು ಎನ್.ಆರ್.ಇ.ಪಿ. (ಅಭಾವ) ಕಾರ್ಯಕ್ರಮದಲ್ಲಿ ೧೯೮೬-೮೭ನೇ ಸಾಲಿನಲ್ಲಿ ಕ್ಷೇತ್ರಾಭಿವೃದ್ಧಿ ಅಧಿಕಾರಿಗಳು ಸಂತಪೂರ ತೆಗೆದುಕೊಂಡಿದ್ದಾರೆ. ಈ ಕೆಲಸಕ್ಕೆ ಇಲ್ಲಿಯವರೆಗೆ ಳಟಿ.೨೩೩-೦೦ ರೂ. ಖರ್ಚು ಮಾಡಲಾಗಿದೆ.

ಆ) ರಸ್ತೆಯಲ್ಲಿ ಬೇನಾಮಿಯಾಗಿ ಹಣ ವೆಚ್ಚ ಮಾಡಿರುವುದು ಕಾರ್ಯನಿರ್ವಾಹಕ ಇಂಜಿನಿಯರ್, ಜಿಲ್ಲಾ ಪರಿಷತ್ ಇಂಜಿನಿಯರಿಂಗ್ ವಿಭಾಗ, ಬೀದರ್ ಅವರ ಗಮನಕ್ಕೆ ಬಂದಿಲ್ಲವೆಂದು ತಿಳಿಸಿದ್ದಾರೆ.

ಇ) ಸಂಬಂಧಪಟ್ಟ ಜಿಲ್ಲಾ ಪರಿಷತ್ತಿನವರನ್ನು ಇದನ್ನು ಪರಿಶೀಲಿಸಿ ಸೂಕ್ತ ಕ್ರಮ ತೆಗೆದು ಕೊಳ್ಳುವಂತೆ ತಿಳಿಸಲಾಗುವುದು.